ಇ) ಈ ಶೀತಲ ಕೇಂದ್ರಗಳ ಉಪಯೋಗ ಪ್ರತಿಯೊಬ್ಬ ರೈತರಿಗೂ ದೊರೆಯುತ್ತಿದೆಯೇ?

ಶ್ರೀ ಶಶಿಕಾಂತ ಅಕ್ಕಪ್ಪ ನಾಯಿಕ (ತೋಟಗಾರಿಕಾ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 68 ಶೀತಲ ಕೇಂದ್ರಗಳಿರುತ್ತವೆ.

ಆ) ಕರ್ನಾಟಕ ರಾಜ್ಯ ತೋಟಗಾರಿಕೆ ಮಿಷನ್ ಅಡಿ ಶೀತಲಗೃಹ ನಿರ್ಮಾಣಕ್ಕಾಗಿ ಹೂಡುವ ಬಂಡವಾಳಕ್ಕೆ ಶೇಕಡ 25ರಷ್ಟು ಬಂಡವಾಳ ಆಧಾರಿತ ಸಹಾಯಧನ (ಕ್ರೆಡಿಟ್ ಲಿಂಕ್ಡ್ ಸಬ್ಸಿಡಿ) ಯನ್ನು ನೀಡಲಾಗುತ್ತಿದೆ. ಶೇ.75ನ್ನು ಸಂಸ್ಥೆ/ಸಹಕಾರ ಸಂಘ/ ಉದ್ಯಮಿ ಭರಿಸಬೇಕು.

"ಶೀತಲಗೃಹ ವಿದ್ಯುತ್ ಸಹಾಯಧನ" ಯೋಜನೆಯಡಿ ತೋಟಗಾರಿಕೆ ಉತ್ಪನ್ನಗಳನ್ನು ಶೇಖರಿಸುವ ಶೀತಲಗೃಹಗಳು ಬಳಸುವ ಪ್ರತಿ ಯೂನಿಟ್ ವಿದ್ಯುತ್‌ಗೆ ರೂ.1 ರಂತೆ ಸಹಾಯಧನವನ್ನು ನೀಡಲಾಗುತ್ತಿದೆ.

ಇ) ಹೌದು.

1233 (1549) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ರೈತರಿಗೆ ವಿತರಿಸುತ್ತಿರುವ ಬಿತ್ತನೆ ಬೀಜಗಳು ಯಾವುವು;

ಆ) ಈ ಬಿತ್ತನೆ ಬೀಜಗಳು ಕಳಪೆ ದರ್ಜೆಯದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ರೈತರಿಗೆ ಯಾವ ಯಾವ ರೀತಿಯ ಔಷಧಿಗಳನ್ನು ಸರ್ಕಾರದಿಂದ ಒದಗಿಸಲಾಗುತ್ತಿದೆ;

ಈ) ಈ ಔಷಧಿಗಳನ್ನು ಎಲ್ಲಿ ಖರೀದಿಸಲಾಗುತ್ತದೆ;

ಉ) ಇದಕ್ಕಾಗಿ, ಮೀಸಲಿಟ್ಟಿರುವ ಹಣವೆಷ್ಟು?

ಶ್ರೀ ಬಂಡೆಪ್ಪ ಕಾಶೆಂಪೂರ್ (ಕೃಷಿ ಸಚಿವರು) :

ಅ) ಭತ್ತ, ರಾಗಿ, ಜೋಳ, ಮುಸುಕಿನ ಜೋಳ, ಸಜ್ಜೆ, ತೊಗರಿ, ಹೆಸರು, ಉದ್ದು, ಅಲಸಂದೆ, ಹುರುಳಿ, ಅವರೆ, ನೆಲಗಡಲೆ, ಸೂರ್ಯಕಾಂತಿ, ಸೋಯವರೆ, ಹರಳು, ಎಳ್ಳು, ಹುಚ್ಚೆಳ್ಳು ಮತ್ತು ಹತ್ತಿ ಬೆಳೆಗಳ ಬಿತ್ತನೆ ಬೀಜವನ್ನು ವಿತರಿಸಲಾಗುತ್ತಿದೆ.

ಆ) ಇಲ್ಲ.

ಇ) ಬೆಳೆಗಳನ್ನು ಕೀಟ-ರೋಗಗಳಿಂದ ಸಂರಕ್ಷಿಸುವ ಸಲುವಾಗಿ ಇಲಾಖೆಯಿಂದ ಸಹಾಯಧನದ ರೂಪದಲ್ಲಿ ಕೀಟನಾಶಕಗಳು, ಶಿಲೀಂಧ್ರ ನಾಶಕಗಳು, ಜೈವಿಕ ಪೀಡೆನಾಶಕಗಳು, ಕಳೆನಾಶಕಗಳನ್ನು ವಿತರಿಸಲಾಗುತ್ತಿದೆ.

ಈ) ಈ ಔಷಧಿಗಳನ್ನು ವಿವಿಧ ಅಧಿಕೃತ ಔಷಧಿ ಸರಬರಾಜು ದಾರರಿಂದ ಟೆಂಡರ್ ಕರೆಯುವ ಮೂಲಕ ಖರೀದಿಸಲಾಗುತ್ತದೆ.

ಉ) ವಿವಿಧ ಪೀಡೆನಾಶಕಗಳನ್ನು ಸಹಾಯಧನದ ರೂಪದಲ್ಲಿ ವಿತರಿಸಲು ರೂ. 6.5 ಕೋಟಿ ಅನುದಾನವನ್ನು ನಿಗದಿಪಡಿಸಲಾಗಿರುತ್ತದೆ.

1234 (1550) : ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಹಿಂದುಳಿದ ಗಡಿ ಪ್ರದೇಶ, ಚಾಮರಾಜನಗರ ಜಿಲ್ಲೆಯೂ ಸೇರಿದಂತೆ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು;

ಆ) ಹೊಸದಾಗಿ ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡಲಾಗುವುದೇ; ಹಾಗಿದ್ದಲ್ಲಿ ಮಂಜೂರಾತಿಗಾಗಿ ಇರುವ ಮಾನದಂಡವೇನು;

ಇ) ನ್ಯಾಯ ಬೆಲೆ ಅಂಗಡಿಗಳ ಮುಖಾಂತರ ಪ್ರತಿಯೊಬ್ಬ ಫಲಾನುಭವಿಗಳ ಆಹಾರ ಪದಾರ್ಥಗಳನ್ನು ಸರಿಯಾಗಿ ವಿತರಣೆ ಮಾಡಲಾಗುತ್ತಿದೆಯೇ;

ಈ) ಇಲ್ಲದಿದ್ದಲ್ಲಿ, ಆ ನ್ಯಾಯ ಬೆಲೆ ಅಂಗಡಿಯ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ) ದಿನಾಂಕ: 30-6-2007ರ ಅಂತ್ಯಕ್ಕೆ ಚಾಮರಾಜನಗರ ಜಿಲ್ಲೆಯೂ ಸೇರಿದಂತೆ ರಾಜ್ಯದಲ್ಲಿರುವ ಒಟ್ಟು ನ್ಯಾಯಬೆಲೆ ಅಂಗಡಿಗಳ ಸಂಖ್ಯೆ 20.553, ಚಾಮರಾಜನಗರ ಜಿಲ್ಲೆಯಲ್ಲಿರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ 441.

ಆ) ಹೌದು.

ಕರ್ನಾಟಕ ಅಗತ್ಯ ವಸ್ತುಗಳ (ಸಾರ್ವಜನಿಕ ವಿತರಣೆ ಪದ್ಧತಿ) ನಿಯಂತ್ರಣ ಆದೇಶ 1992ರನ್ವಯ ಹಾಗೂ ಸರ್ಕಾರ ಹೊರಡಿಸಿರುವ